# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.69/2024

Pw-03
Cw-04

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ಪಾಂಡುರಂಗಪ್ಪ ಕೆ.ಹೆಚ್ |
| ತಂದೆಃಗಂಡನ ಹೆಸರುಃ | ಶ್ರೀ ಕೊಟ್ರೇಶಪ್ಪ |
| ವಯಸ್ಸುಃ | 30 ವರ್ಷ |
| ಉದ್ಯೋಗಃ | ಖಾಸಗಿ ಕೆಲಸ |
| ವಾಸ ಸ್ಥಳಃ | ಕರೂರು ತಾಃ ರಾಣೇಬೆನ್ನೂರು |

**ದಿನಾಂಕ:11.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಕಳೆದ 8 ವರ್ಷಗಳಿಂದ VHP ಚಿಕನ್ ಫ್ಯಾಕ್ಟರಿಯಲ್ಲಿ ನೌಕರನಾಗಿ ಕೆಲಸ ಮಾಡುತ್ತಿದ್ದೇನೆ. ಈಗ್ಗೆ 1½-02 ವರ್ಷಗಳ ಹಿಂದೆ ಸಂಜೆ 5.00 ಗಂಟೆ ಸಮಯದಲ್ಲಿ ನಾನು ನನ್ನ ಚಿಕನ್ ಫ್ಯಾಕ್ಟರಿ ಕೆಲಸ ಮುಗಿಸಿಕೊಂಡು ಕರೂರು ಗ್ರಾಮದ ರೈಲ್ವೆ ಮಾರ್ಗವಾಗಿ ನಮ್ಮ ಮನೆಗೆ ಬರುತ್ತಿದ್ದೆನು. ಅಲ್ಲಿ ರೈಲ್ವೆ ಬ್ರಿಡ್ಜ flyover ಹತ್ತಿರ ರೈಲ್ವೆ ಪೊಲೀಸರು ಇದ್ದರು. ಬೈಕಿನಲ್ಲಿ ಹೋಗುತ್ತಿದ್ದ ನನ್ನನ್ನು ಮತ್ತು ಚಾಸಾ-5 ಮಹೇಶ್ ರವರನ್ನು ರೈಲ್ವೆ ಪೊಲೀಸರು ಅಲ್ಲಿಗೆ ಕರೆದರು. ರೈಲ್ವೆ ಪೊಲೀಸರು ಒಂದು ಖಾಲಿ ಹಾಳೆಯ ಮೇಲೆ ನನ್ನ ಮತ್ತು ಚಾಸಾ-5 ರವರ ಸಹಿಗಳನ್ನು ಪಡೆದುಕೊಂಡು ಹಾಗೂ ಪೋಟೋಗಳನ್ನು ತೆಗೆದುಕೊಂಡರು. ಸದರಿ ದಾಖಲಾತಿಯನ್ನು ಈಗ ನೋಡುತ್ತಿದ್ದು, ಅದನ್ನು ದಿನಾಂಕಃ20.06.2024 ರ ಮೃತಳು ರೈಲ್ವೆ ಬ್ರಿಡ್ಜ ನಿಂದ ಕೆಳಗೆ ಹಾರಿ ಮೃತಪಟ್ಟ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಪೋಟೋಗಳನ್ನು ನೋಡುತ್ತಿದ್ದು,

ಅವುಗಳನ್ನು ಈಗಾಗಲೇ ನಿಪಿ–4, 5 ಎಂದು ಗುರುತಿಸಲಾಗಿದೆ. ಸದರಿ ಪೋಟೋಗಳಲ್ಲಿ ರೈಲ್ವೇ ಬ್ರಿಡ್ಜ ಮತ್ತು ನಾವು ನಿಂತುಕೊಂಡ ಸ್ಥಳ ಕಾಣಿಸುತ್ತದೆ.

ನಂತರ ಪೊಲೀಸರು ಕರೂರು ಗ್ರಾಮಕ್ಕೆ ನನ್ನನ್ನು ಮತ್ತು ಚಾಸಾ–5 ರವರನ್ನು ಒಂದು ಮನೆಗೆ ಕರೆದುಕೊಂಡು ಹೋದರು. ಸದರಿ ಮನೆಯಲ್ಲಿ ಪೊಲೀಸರು ನನ್ನ ಮತ್ತು ಚಾಸಾ–5 ರವರ ಸಹಿಗಳನ್ನು ಒಂದು ಖಾಲಿ ಹಾಳೆಗೆ ತೆಗೆದುಕೊಂಡು, ಪೋಟೋಗಳನ್ನು ತೆಗೆದುಕೊಂಡರು. ಸದರಿ ದಾಖಲಾತಿಯನ್ನು ಈಗ ನೋಡುತ್ತಿದ್ದು, ಅದು ದಿನಾಂಕಃ20.06.2024 ರ ಘಟನಾ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ–6 ಎಂದು ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ–6(ಬಿ) ಎಂದು ಗುರುತಿಸಲಾಯಿತು. ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ–7 ಮತ್ತು 8 ಎಂದು ಗುರುತಿಸಲಾಗಿದೆ. ಪೊಲೀಸರು ನಮ್ಮ ಸಹಿಗಳನ್ನು ನಿಪಿ–3 ಮತ್ತು 6 ಕ್ಕೆ ಯಾವ ಕಾರಣಕ್ಕೆ ತೆಗೆದುಕೊಂಡರು ಮತ್ತು ಪೋಟೋಗಳನ್ನು ಏಕೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಪಿ.ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿ ವಿಚಾರಣೆಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಪಿ.ಪಿ ರವರಿಂದಃ**

6. ದಿನಾಂಕಃ20.06.2024 ರಂದು ಸಂಜೆ 4.55 ರಿಂದ 5.55 ರ ಸಮಯದಲ್ಲಿ ರೈಲ್ವೇ ಪೊಲೀಸರು ನನ್ನನ್ನು ಮತ್ತು ಚಾಸಾ–5 ರವರನ್ನು ರೈಲ್ವೇ ಬ್ರಿಡ್ಜ ಹತ್ತಿರ ಕರೆಸಿ ಪಿರ್ಯಾದಿ ತೋರಿಸಿದ ಜಾಗದಲ್ಲಿ ನಿಪಿ–3 ರಂತೆ ಸ್ಥಳ ಪಂಚನಾಮೆ ಮಾಡಿ ಅದನ್ನು ಸ್ಥಳದಲ್ಲಿಯೇ ನಮಗೆ ಓದಿ ಹೇಳಿ ನಮ್ಮ ಸಹಿಗಳನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ಪೊಲೀಸರು ನಿಪಿ–3 ರಂತೆ ಪಂಚನಾಮೆ ಮಾಡಿರುತ್ತೇವೆಂದು ತೋರಿಸಲು ಪೊಟೋಗಳನ್ನು ತೆಗೆದುಕೊಂಡಿರುತ್ತಾರೆಂದರೆ ಸರಿಯಲ್ಲ.

7. ಅದೇ ದಿನ ಸಂಜೆ 6.00 ರಿಂದ 7.00 ಗಂಟೆ ಸಮಯದಲ್ಲಿ ರೈಲ್ವೇ ಪೊಲೀಸರು ನನ್ನನ್ನು ಮತ್ತು ಚಾಸಾ–5 ರವರನ್ನು ಪಿರ್ಯಾದಿಯ ಮನೆ ಹತ್ತಿರ ಕರೆಸಿ ಪಿರ್ಯಾದಿ ತೋರಿಸಿದ ಜಾಗದಲ್ಲಿ ನಿಪಿ–6 ರಂತೆ ಸ್ಥಳ ಪಂಚನಾಮೆ ಮಾಡಿ ಅದನ್ನು ಸ್ಥಳದಲ್ಲಿಯೇ ನಮಗೆ

ಓದಿ ಹೇಳಿ ನಮ್ಮ ಸಹಿಗಳನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ಪೊಲೀಸರು ನಿಪಿ–6 ರಂತೆ ಪಂಚನಾಮೆ ಮಾಡಿರುತ್ತೇವೆಂದು ತೋರಿಸಲು ನಿಪಿ–7 ಮತ್ತು 8 ರಂತೆ ಪೊಟೋಗಳನ್ನು ತೆಗೆದುಕೊಂಡಿರುತ್ತಾರೆಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯಮಾಡುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

ಮಾನ್ಯ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.